ಅಲ್ಲೇ ಸಾಗುವಳಿ ಹಕ್ಕುಪತ್ರವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ಮಾನ್ಯ ಗೋಪಾಲಕೃಷ್ಣಗೌಡರು ಒಂದು ಆಜ್ಞೆಯನ್ನು ಹೊರಡಿಸಿ ಒಂದು ಲಕ್ಷದ ಇಪ್ಪತ್ತೆಂಟು ಸಾವಿರ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದರು. ಅದರಿಂದ ಅನೇಕ ಪಟ್ಟಣಗಳು, ಕಳಸದಂಥ ಪಟ್ಟಣಗಳು, ಇವತ್ತು ಅರಣ್ಯ ಇಲಾಖೆಯ ಕಾನೂನು ಅನೇಕ ಊರುಗಳನ್ನು ಪಟ್ಟಣಗಳನ್ನು ನುಂಗುವಂಥ ಪರಿಸ್ಥಿತಿ ಬಂದಿದೆ. ದಯಮಾಡಿ ಅದು ಆ ರೀತಿ ಆಗಬಾರದು. ಅದು ಪುನ ಕಂದಾಯ ಇಲಾಖೆಗೆ ವರ್ಗ ಆಗಬೇಕೆಂದು ಸರ್ಕಾರಕ್ಕೆ ಆ ಕ್ಷೇತ್ರದ ಪ್ರತಿನಿಧಿಯಾಗಿ ನಾನು ಮನವಿಯನ್ನು ಮಾಡುತ್ತೇನೆ. ಎರಡನೆಯದಾಗಿ ಸಾಮಾಜಿಕ ಸಮಸ್ಯೆ ನಕ್ಸಲಿಯರ ಸಮಸ್ಯೆಯನ್ನು ನಮ್ಮ ಸ್ನೇಹಿತರೊಬ್ಬರು ಪ್ರಸ್ತಾಪ ಮಾಡಿದ್ದಾರೆ. ಬಂದೂಕು ಮತ್ತು ಮದ್ದುಗುಂಡುಗಳು-ಪೊಲೀಸರಿಗೆ ಮಾತ್ರ ಬೇಗನೆ ಹೋಗುತ್ತವೆ, ಆದರೆ ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸಲು ಏಕೆ ಪರಿಹಾರ ಅಲ್ಲಿಗೆ ಬೇಗನೆ ಹೋಗುವುದಿಲ್ಲ? ಅಷ್ಟೇ ತ್ವರಿತವಾಗಿ ಪರಿಹಾರದ ಹಣವೂ ಅಲ್ಲಿಗೆ ಹೋಗಬೇಕು. ಕೇವಲ ಮದ್ದು ಗುಂಡುಗಳು ಬೇಗನೆ ಪೊಲೀಸರಿಗೆ ಹೋದರೆ ಆ ಸಮಸ್ಯೆ ಪರಿಹಾರವಾಗುವುದಿಲ್ಲ. ಅನಂತರ ಕಾಫಿ ತೋಟದ ಕಾರ್ಮಿಕರಿಗೆ ಹಳದಿ ಕಾರ್ಡುಗಳನ್ನು ವಿತರಣೆ

1.00 ಪಿಎಂ

ಮಾಡಬೇಕು ಎಂಬ ಬಗ್ಗೆ ಬಹಳ ಚರ್ಚೆಯಾಗುತ್ತಿದೆ. ಆದ್ದರಿಂದ ಆ ಕಾರ್ಮಿಕರಿಗೆ ಹಳದಿ ಕಾರ್ಡುಗಳನ್ನು ವಿತರಣೆ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಚಾರದಲ್ಲಿ ದೀರ್ಘವಾದ ಉತ್ತರವನ್ನು ಸರ್ಕಾರದ ಪರವಿಯಿಂದ ಕೊಟ್ಟಿದ್ದೇವೆ. ರಾಷ್ಟ್ರೀಯ ಉದ್ಯಾನವನಕ್ಕೆ ಕೇಂದ್ರ ಸರ್ಕಾರದ ಕಾನೂನು ಇದೆ. ಅದರನ್ವಯ ರಾಷ್ಟ್ರೀಯ ಉದ್ಯಾನವನಗಳೆಂದು ಎಲ್ಲೆಲ್ಲಿ ಬರುತ್ತದೆ ಅಲ್ಲಿರುವಂಥ ಜನವಸತಿಯನ್ನು ಸ್ಥಳಾಂತರಗೊಳಿಸಬೇಕು ಎಂಬುದು ಆ ಕಾನೂನಿನ ಅಡಿಯಲ್ಲಿರುವ ವಿಷಯ. ಆದ್ದರಿಂದ ಆ ಗಡಿಪ್ರದೇಶಗಳಲ್ಲಿ, ಅಂದರೆ ರಾಷ್ಟ್ರೀಯ ಉದ್ಯಾನವನದ ಹೊರಗಡೆಯ ಗಡಿಪ್ರದೇಶದಲ್ಲಿ ಇರುವಂಥ ನಿವಾಸಿಗಳನ್ನು ಪುನರ್ವಸತಿ ಮಾಡಿಕೊಡತಕ್ಕ ಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ. ನೀವು ಈಗಾಗಲೇ ಪ್ರಸ್ತಾಪ ಮಾಡಿದಿರಿ, ಮಾನ್ಯ ಸದಸ್ಯರಾದಂಥ ಮಹಿಮಾಪಾಟೀಲರು, ಹಾಗೂ ರವಿಯವರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಅಲ್ಲಿಯ ಗಣಿ ಕೈಗಾರಿಕೆಯಿಂದ ತುಂಗಾ ನದಿಯ ಮತ್ತು ತುಂಗಭದ್ರಾ ನದಿಯ ಮೂಲಗಳು ಬತ್ತಿಹೋಗಿ ಹೂಳು ತುಂಬುತ್ತಿದೆ ಎಂದು ಹೇಳಿದಾಗ, ಉದ್ಯಾನವನವನ್ನು ಕಾಪಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಆ ಜೀವಸಂಕಲನವನ್ನು ಉಳಿಸಿಕೊಳ್ಳಬೇಕಾಗಿದ್ದರೆ ರಾಷ್ಟ್ರೀಯ ಉದ್ಯಾನವನ ಆಗತಕ್ಕದ್ದು ಅತ್ಯಂತ ಅದತ್ಯ. ಎರಡಕ್ಕೂ ವಿರೋಧ ಮಾಡಲು ಆಗುವುದಿಲ್ಲ. ಇದು ವಿರೋಧಾಭಾಸವಾದ ರೀತಿಯಾಗುತ್ತದೆ. ಆ ಕಾರಣಕ್ಕಾಗಿ ತಾವು ಸಂಪೂರ್ಣವಾದ ಸಹಕಾರವನ್ನು ಈ ವಿಚಾರದಲ್ಲಿ ಕೊಡಬೇಕು. ಉಳಿದಿರತಕ್ಕ ವಿಚಾರವೇನಿದೆ ಅದರ ಬಗ್ಗೆ ಸರ್ಕಾರ ತೀವ್ರವಾಗಿ, ನಕ್ಸಲಿಯರ ವಿಚಾರದಲ್ಲಿ ಬಂದಿರುವ ಪರಿಹಾರ ವಿಚಾರವೇನಿದೆ ಆ ಸಮಸ್ಯೆಯನ್ನು ಬಗೆಹರಿಸಲು ಸಂಪೂರ್ಣವಾದ ಗಂಭೀರವಾದ ಗಮನವನ್ನು ಸರ್ಕಾರ ಕೊಡುತ್ತದೆಂದು ಹೇಳುತ್ತೇನೆ.

ವಿಷಯ (ಪ) : ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಟ್ರಾನ್ಸ್‌ಫಾರ್ಮರ್ ಒದಗಿಸುವ ಬಗ್ಗೆ

ಶ್ರೀ ಜಿ. ನರಸಿಂಹಸ್ವಾಮಿ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕೆ.ಪಿ.ಟಿ.ಸಿ.ಎಲ್. ನಿಂದ ಕುಡಿಯುವ ನೀರಿಗೆ ಒದಗಿಸುವಂಥ ಟ್ರಾನ್ಸ್‌ಫಾರ್ಮರ್ಸ್‌ನದ್ದು ಬಹಳ

ಸಮಸ್ಯೆಯಾಗಿದೆ. ಸಂಬಂಧಪಟ್ಟ ಅಧಿಕಾರಿಯವರನ್ನು ಕೇಳಿದರೆ ಮುಖ್ಯ ಇಂಜಿನಿಯರ್‌ರವನ್ನು ನೋಡಿ ಎಂದು ಹೇಳುತ್ತಾರೆ, ಮುಖ್ಯ ಇಂಜಿನಿಯರ್‌ರವರನ್ನು ಕೇಳಿದರೆ ಟೆಕ್ನಿಕಲ್ ಡೈರೆಕ್ಟರ್‌ನ್ನು ನೋಡಿ ಎಂದು ಹೇಳುತ್ತಾರೆ, ಅವರನ್ನು ಕೇಳಿದರೆ ಮೆನೇಜಿಂಗ್ ಡೈರೆಕ್ಟರ್‌ನ್ನು ನೋಡಿ ಎಂದು ಹೇಳುತ್ತಾರೆ. ಹೀಗಾಗಿ 20 ರಿಂದ 25 ದಿವಸಗಳಾದರೂ ಟ್ರಾನ್ಸ್‌ಫಾರ್ಮರ್‌ಗಳ ವ್ಯವಸ್ಥೆ ಏನಿದೆ ಅದನ್ನು ಸರಿಯಾಗಿ ಒದಗಿಸುತ್ತಿಲ್ಲ. ಇದು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೂ ಅನುಭವ ಬಂದಿದೆ. ಮಾಗಡಿ ತಾಲ್ಲೂಕಿನ ಶಾಸಕರು. ಗೌರಿಬಿದನೂರಿನ ಶಾಸಕರು ಮತ್ತು ಚಿಕ್ಕಬಳ್ಳಾಪುರದ ಶಾಸಕರು ನಮಗೆಲ್ಲಾ ಅನುಭವವಾಗಿದೆ. ಇದನ್ನು ಕೇವಲ ಒಂದು ಏಜನ್ಸಿಗೆ ಕೊಟ್ಟು ಅವರು ತೆಗೆದುಕೊಳ್ಳದೆ ಇರುವುದರಿಂದ ಅವರು ಬಿಟ್ಟಿದ್ದರಿಂದ ಈ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಸಂಭವವಿರುವುದರಿಂದ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಸಾಧ್ಯವಾದಷ್ಟು ಬೇಗ ಈ ವ್ಯವಸ್ಥೆಯನ್ನು ಸರಿಮಾಡಬೇಕೆಂದು ಮತ್ತೊಮ್ಮೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಇಂಧನ ಸಚಿವರಾದಂಥ ಮಾನ್ಯ ರೇವಣ್ಣನವರು ಎರಡು ಬಾರಿ ಸಭೆಯನ್ನು ಕರೆದಿದ್ದಾರೆ. ನೀವು ಹೇಳಿದಂತೆ 230 ಕೋಟಿ ರೂಪಾಯಿಗಳಿಗೆ ಒಂದು ಗುತ್ತಿಗೆ ಕಂಪನಿಗೆ ಕೊಟ್ಟಂಥದ್ದು ಕೂಡ ಈ ಅವವಸ್ಥೆಗೆ ಕಾರಣವಾಗಿದೆ. ಇಲ್ಲಿ ಅನೇಕ ಕಡೆ ಟ್ರಾನ್ಸ್‌ಫಾರ್ಮರ್‌ನ ಚಿಕ್ಕ ಚಿಕ್ಕ ಕಲ್ಲುಗಳನ್ನು ಹಾಕಿ ಆ ಎಣ್ಣೆ ಮೇಲೆ ಬರುವಂಥ ರೀತಿಯಲ್ಲಿ ನೋಡಿ ಆ ಎಣ್ಣೆಯನ್ನು ಸಂಗ್ರ ಮಾಡಿ ಬೆಂಗಳೂರು ಹೈದ್ರಾಬಾದ್ ನಗರಗಳಿಗೆ ಕಳುಹಿಸಿಕೊಡತಕ್ಕದ್ದು ಇದೆ. ಈ ಟ್ರಾನ್ಸ್‌ಫಾರ್ಮರ್‌ಗಳನ್ನು ನಾವು ದುರಸ್ತಿ ಮಾಡುವಾಗ ಕಳುಹಿಸಿಕೊಡಬೇಕಾಗಿದ್ದರೆ ಸಂಬಂಧಪಟ್ಟ ಇಂಜಿನಿಯರ್‌ರವರು ಆ ಎಣ್ಣೆಯನ್ನು ತೆಗೆದುಕೊಂಡು ಇಟ್ಟುಕೊಂಡು ಅದರ ಬಗ್ಗೆ ಬರೆಯಬೇಕಾಗುತ್ತದೆ, they have to surrender that oil ಆದರೆ ಆ ಕೆಲಸವನ್ನು ಅನೇಕ ಕಡೆ ಮಾಡಿಲ್ಲ. ಇದರಿಂದ ದುರಸ್ಥಿ ಮಾಡಿರತಕ್ಕವರೂ ಕೂಡ ಇದರ ಬಗ್ಗೆ ನೀವು ಎಣ್ಣೆಯನ್ನು ನಾನು ಕೊಡು ಎಂದರೆ ಕೊಡಲು ಆಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಈ ಟ್ರಾನ್ಸ್‌ಫಾರ್ಮರ್ ಎಣ್ಣೆ ಬಹಳ ದುಬಾರಿಯಾಗಿರುವುದರಿಂದ ಈ ಕಾಳಸಂತೆ ವ್ಯಾಪ್ರ ನಡೆಯುತ್ತಿದೆ. ಈ ಕಾರಣಕ್ಕಾಗಿ ನಾವು ರೈತರ ಕ್ಷಮೆಯನ್ನು ಕೇಳುತ್ತಿದ್ದೇವೆ. ಈ ಸರ್ಕಾರ ಇದರ ಬಗ್ಗೆ ತೀವ್ರವಾದಂಥ ಗಮನ ಕೊಟ್ಟಿದೆ. ಈಗಾಗಲೇ ಎರಡುಮೂರು ಸಭೆಗಳೂ ಸಹ ಆಗಿವೆ. ಮಾನ್ಯ ಇಂಧನ ಸಚಿವರ ಈ ಒಂದು ತಿಂಗಳೊಳಗಾಗಿ ಈ ಎಲ್ಲಾ ಏನು ಕಷ್ಟ ಇದೆ ಇದನ್ನು ಪರಿಹಾರಿಸತಕ್ಕದ್ದು ಮತ್ತು ದುರಸ್ಥಿ ಮಾಡಿ ಉತ್ತಮ ಗುಣಮಟ್ಟದ ಟ್ರಾನ್ಸ್‌ಫಾರ್ಮರ್‌ಗಳನ್ನೂ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ನಿಮಗೆ ಈಗಾಗಲೇ ಗೊತ್ತಿರುವಂತೆ ಕೆಲವು ಕಾರ್ಯಕ್ರಮಗಳೂ ಕೂಡ ಇದೆ. ಖಾಸಗಿಯಾಗಿ ಯಾರಾದರೂ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಳ್ಳುವುದಾಗಿದ್ದಾರೆ ಅದನ್ನು 14 ಸಾವಿರ ರೂಪಾಯಿಗಳಿಂದ ಹಿಡಿದು 35 ಸಾವಿರ ರೂಪಾಯಿಗಳವರೆಗೆ ಇರತಕ್ಕ ಬೆಲೆಗೆ ಆ ಕೆ.ವಿ. ಮೇಲೆ ಆಧಾರಿತವಾಗಿ ತೆಗೆದುಕೊಳ್ಳತಕ್ಕದ್ದು ಸಹ ಇದೆ. ಇದರಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡುತ್ತೇವೆ. ಅನಂತರ ರೈತರ ಪಂಪುಸೆಟ್ಟುಗಳಿಗೆ ಆದ್ಯತೆಯನ್ನು ಕೊಡುತ್ತೇವೆ. ತಾವು ಹೇಳಿದ ಮಾತು ಅಕ್ಷರಶಃ ಸತ್ಯ. ಇದರ ಬಗ್ಗೆ ಸರ್ಕಾರ ಖಂಡಿತವಾಗಿ ಕ್ರಮ ಕೈಗೊಳ್ಳುತ್ತದೆ.

ವಿಷಯ (ಫ) : ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಆಶ್ರಯ ಹಾಗೂ ಅಂಬೇಡ್ಕರ್ ಮನೆಗಳ ಹಂಚಿಕೆ